1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

ದಿನಾಂಕ ಃ 02.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ:4 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಸ್ವಾಮಿ |
| ತಂದೆಯ ಹೆಸರು | ಶೇಖರ್ |
| ವಯಸ್ಸು | 25 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕಿರಗಸೂರು, ಮಳವಳ್ಳಿ ತಾ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ಚಾಸಾ.1 ನನ್ನ ತಂದೆ. ಚಾಸಾ.2 ನನ್ನ ತಾಯಿ. ಚಾಸಾ.3 ನನ್ನ ಅಣ್ಣ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನಿತೀಶ್ ಕುಮಾರ್ ನನ್ನ ಭಾವ. 2 ನೇ ಆರೋಪಿ ಹೊನ್ನಯ್ಯ ನನ್ನ ತಾತ. 2 ನೇ ಆರೋಪಿ, 1 ನೇ ಆರೋಪಿಯ ತಂದೆ. ನನ್ನ ಅಕ್ಕನ ಹೆಸರು ಮಧು ಮಾಲಿನಿ. ಆಕೆ ತೀರಿಕೊಂಡು, 4 ವರುಷದ ಹತ್ತಿರ ಆಗಿದೆ. ನನ್ನ ಅಕ್ಕ ಮಧು ಮಾಲಿನಿ, ತೀರಿಕೊಳ್ಳುವಾಗ, ಆಕೆಗೆ ಮದುವೆಯಾಗಿ 8 ವರುಷ ಆಗಿತ್ತು. ನನ್ನ ಅಕ್ಕ ತೀರಿಕೊಳ್ಳುವ ಸಮಯದಲ್ಲಿ, ವಡ್ಡರಹಳ್ಳಿಯಲ್ಲಿ 1 ನೇ ಆರೋಪಿಯೊಂದಿಗೆ ವಾಸ ಇದ್ದಳು. ಇವರೊಂದಿಗೆ 2 ನೇಆರೋಪಿ ಸಹ ವಾಸ ಇದ್ದರು.

2) ನನ್ನ ಅಕ್ಕನ ಮದುವೆಯಾಗುವಾಗ ನನಗೆ 12 ವರುಷ ಆಗಿತ್ತು. ನನ್ನ ಅಕ್ಕನ ಮತ್ತು 1 ನೇ ಆರೋಪಿಗೆ ಸಂಬಂಧ, ವಡ್ಡರಹಳ್ಳಿಯ ನರಸಿಂಹಯ್ಯ ಎಂಬುವವರ ಮೂಲಕ 1 ನೇ ಆರೊಪಿ ಮತ್ತು ಆತನ ಕುಟುಂಬದ ಪರಿಚಯ ಆಗಿತ್ತು. ನನ್ನ ಅಕ್ಕನ ಮದುವೆ ಮಾತುಕತೆ, ಕಿರಗಸೂರಿನ ನಮ್ಮ ಮನೆಯಲ್ಲಿ ಆಗಿತ್ತು. ಮದುವೆ ಮಾತುಕತೆಗೆ ಆರೋಪಿಯ ಕಡೆಯಿಂದ, 1 ಮತ್ತು 2 ನೇ ಆರೋಪಿಗಳು, ಊರಿನ ಸುಮಾರು 4-5 ಜನ ಗ್ರಾಮಸ್ತರು ಹಾಗೂ ನಮ್ಮ ಕಡೆಯಿಂದ ನನ್ನ ತಂದೆ, ತಾಯಿ, ನನ್ನ ಅಣ್ಣ, ನಾನು, ಅಕ್ಕ ಪಕ್ಕದ ಮನೆಯವರು ಮತ್ತು ಗ್ರಾಮಸ್ತರು ಸೇರಿದ್ದೆವು. ಮದುವೆ ಬಗ್ಗೆ 1 ಲಕ್ಷ ನಗದು ಹಣ, 50 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿಯಾಗಿ ಕೊಡಬೇಕು ಅಂತ ಗಂಡಿನ ಮನೆಯವರು ಕೇಳಿದ್ದರು. ಅದಕ್ಕೆ, ಈಗ ಚಿನ್ನ ಮಾಡಿಸಿಕೊಡುತ್ತೇವೆ, ಹಣವನ್ನು ಸಮಯ ತೆಗೆದುಕೊಂಡು, ಮುಂದಿನ ದಿನಗಳಲ್ಲಿ ಕೊಡುವುದಾಗಿ ಹೇಳಿದ್ದೆವು. ನನ್ನ ಅಕ್ಕನ ಮದುವೆ ಆದ ನಂತರ, ಮದುವೆಯಾದಾಗಿನಿಂದಲೂ 1 ನೇ ಆರೋಪಿ ನಿತಿಶ್

ಕುಮಾರ್ ನೊಂದಿಗೆ , ವಡ್ಡರಹಳ್ಳಿಯಲ್ಲಿ 1 ನೇ ಆರೋಪಿ ಮನೆಯಲ್ಲಿ ವಾಸ ಇದ್ದಳು. 4 ವರುಷ ನನ್ನ ಅಕ್ಕ ಚೆನ್ನಾಗಿ ಇದ್ದರು. ನಂತರದ ದಿನಗಳಲ್ಲಿ , ನಿಮ್ಮ ತಂದೆ 1 ಲಕ್ಷ ಹಣ ಕೊಡುತ್ತೇವೆ ಎಂದು ಹೇಳಿ ಕೊಟ್ಟಿಲ್ಲ , ಹೋಗಿ ತೆಗೆದುಕೊಂಡು ಬಾ ಅಂತ ಹೇಳಿ ನನ್ನ ಅಕ್ಕನಿಗೆ ಹೊಡೆದು ಕಳುಹಿಸುತ್ತಿದ್ದರು. ನನ್ನ ಅಕ್ಕ , ಈ ವಿಪಯವನ್ನು ನನ್ನ ಅಮ್ಮನಿಗೆ ಹೇಳುತ್ತಿದ್ದರು. ನಿಮ್ಮ ಅಪ್ಪನಿಗೆ ಗೊತ್ತಾದರೆ ಜಗಳವಾಗುತ್ತದೆ, ಮತ್ತೆ ಆರೋಪಿ ಮನೆಯವರು ತೊಂದರೆ ಕೊಡುತ್ತಾರೆ,ನಾವು ಹಣವನ್ನು ತಂದು ಕೊಡುತ್ತೇವೆ, ನೀನು ಗಂಡನ ಮನೆಗ ಹೋಗು ಎಂದು ಹೇಳಿ, ನನ್ನ ಅಕ್ಕನನ್ನು ವಾಪಸ್ಸು ಗಂಡನ ಮನೆಗೆ ಕಳುಹಿಸಿಕೊಟ್ಟೆವು. ಮತ್ತೆ ನನ್ನ ಅಕ್ಕ, ನನಗೆ ಫೋನ್ ಮಾಡಿ, ಮತ್ತೆ ನನಗೆ ಹೊಡೆಯುತ್ತಾರೆ, ದುಡ್ಡನ್ನು ತೆಗೆದುಕೊಂಡು ಬಾ ಅಂತ ಹಿಂಸೆ ಕೊಡುತ್ತಾರೆ ಎಂದು ನನ್ನ ಅಮ್ಮನಿಗೆ ಫೋನ್ ನಲ್ಲಿ ಹೇಳಿದರು. ನಂತರ ನನ್ನ ತಾಯಿ ಮತ್ತು ನಾನು 50 ಸಾವಿರ ರೂ. ಹಣ ಮತ್ತು ಒಂದು ಚಿನ್ನದ ಉಂಗುರವನ್ನು ತೆಗೆದುಕೊಂಡು ಹೋಗಿ, ನನ್ನ ಅಕ್ಕನಿಗೆ ಕೊಟ್ಟು , ಚೆನ್ನಾಗಿರಿ, ಜಗಳ ಆಡಬೇಡಿ ಅಂತ ಆರೋಪಿಗಳಿಗೆ ಹೇಳಿ ಬಂದಿದ್ದೆವು. ಸ್ವಲ್ಪ ದಿನ ಚೆನ್ನಾಗಿದ್ದರು. ಮತ್ತೆ ಕೈಗೆ ಚೈನು ತರಲು ಹಿಂಸೆ ಕೊಡುತ್ತಿದ್ದರು. ಆಗ ನಮ್ಮ ಅಕ್ಕ ಮತ್ತೆ ಫೋನ್ ಮಾಡಿ ವಿಷಯ ತಿಳಿಸಿದರು. ನಾವು ಹೋಗೋಣ ಅಂದುಕೊಂಡು ಸುಮ್ಮನಾದೆವು, ಹೋಗಲಿಲ್ಲ ಮತ್ತೆ ನನ್ನ ಅಕ್ಕ ಫೋನ್ ಮಾಡಿ, ಹೊಡೆಯುತ್ತಿದ್ದಾರೆ, ಬಡಿಯುತ್ತಿದ್ದಾರೆ, ನನ್ನ ಕೈಯ್ಯಲ್ಲಿ ತಡೆಯಲು ಆಗುತ್ತಿಲ್ಲ, ದಯವಿಟ್ಟು ಬಂದು ಕರೆದುಕೊಂಡು ಹೋಗಿ ಅಂತ ಹೇಳಿದಳು. ನಾನು ಮತ್ತು ನನ್ನ ತಾಯಿ, ದಿಃ02.10.2020 ರಂದು ಆರೋಪಿ ಮನೆಗೆ ಹೋಗಿ, ಅಕ್ಕನನ್ನು ಕಳುಹಿಸಿ, ಸ್ವಲ್ಪ ದಿನ ಇದ್ದು ಬರುತ್ತಾಳೆ ಎಂದು ಕೇಳಿಕೊಂಡಾಗ, 1 ನೇ ಆರೋಪಿ, ಮಕ್ಕಳನ್ನು ಕರೆದುಕೊಂಡು ಹೋಗಿ, ಒಂದು ದಿನ ಬಿಟ್ಟು ರಜೆ ಇದೆ, ನಾನು ಮಾಲಿನಿಯನ್ನು ಕರೆದುಕೊಂಡು ಬರುತ್ತೇನೆ ಅಂತ ಹೇಳಿ, ನಮ್ಮನ್ನು ಕಳುಹಿಸಿಬಿಟ್ಟರು. ಆಗ ನಾನು ಮತ್ತು ನನ್ನ ತಾಯಿ ಮಕ್ಕಳನ್ನು ಕರೆದುಕೊಂಡು ಊರಿಗೆ ಬಂದು ಬಿಟ್ಟೆವು.

3) 3 ನೇ ತಾರಿಖು, ಆರೋಪಿಗಳು ಫೋನ್ ಮಾಡಿರಲಿಲ್ಲ. ಭಾನುವಾರ, 4 ನೇ ತಾರೀಖು, ನನ್ನ ಅಕ್ಕ ಬೆಳಿಗ್ಗೆ ಫೋನ್ ಮಾಡಿ, ಕರೆದುಕೊಂಡು ಬರುತ್ತೇನೆ ಅಂತ ಆರೋಪಿ ಹೇಳಿದ್ದರು , ಆದರೆ ಕರೆದುಕೂಂಡು ಬರುವ ಸೂಚನೆ ಕಂಡು ಬರುತ್ತಿಲ್ಲ, ಆದ್ದರಿಂದ ನೀವು ಮತ್ತೆ 1 ನೇ ಆರೋಪಿಗೆ ಫೋನ್ ಮಾಡುವಂತೆ ತಿಳಿಸಿದರು. 1 ನೇ ಆರೋಪಿಗೆ ಫೋನ್ ಮಾಡಿದಾಗ, ಆತ ಫೋನ್ ಕರೆಯನ್ನು ಸ್ವೀಕರಿಸಲಿಲ್ಲ. ನಂತರ ನನ್ನ ಅಕ್ಕ, ನನಗೆ ಫೋನ್ ಮಾಡಿ, ಕರೆದುಕೊಂಡು ಬರಲ್ಲವಂತೆ, ದುಡ್ಡನ್ನು ಮತ್ತು ಚೈನನ್ನು ಇಲ್ಲಿಗೆ ತರಲು ಹೇಳು ಅಂತ ಹೊಡೆಯುತ್ತಿದ್ದಾರೆ, ಬೇಗ ಅಪ್ಪನಿಗೆ ಹೇಳು ಅಂತ ನನಗೆ ಫೋನ್ ನಲ್ಲಿ ತಿಳಿಸಿದರು. ಇದಾದ ಅರ್ಧ ಗಂಟೆಗೆ, ನನ್ನ ತಂದೆ ನನಗೆ ಫೋನ್ ಮಾಡಿ, ಎಲ್ಲಿದಿಯಾ, ನಿನ್ನ ಅಕ್ಕ ನೇಣುಹಾಕಿಕೊಂಡಿದ್ದಾಳಂತೆ, ನಿಮ್ಮ ಭಾವ ಫೋನ್ ಮಾಡಿದ್ದರು, ಬೇಗ ಬಾ ಅಂತ ತಿಳಿಸಿದ್ದರು. ನಂತರ ನಾನು ಮತ್ತು ನನ್ನ ಅಣ್ಣ

ಚಾಸಾ.3 ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ನನ್ನ ತಂದೆ ನಮಗಿಂತ ಮುಂಚೆಯೇ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿಗೆ ಹೋಗಿ ನೋಡುವಷ್ಟರಲ್ಲಿ ನನ್ನ ಅಕ್ಕ ತೀರಿ ಹೋಗಿದ್ದರು. ಆಸ್ಪತ್ರೆಯಲ್ಲಿ ನನ್ನ ಅಕ್ಕನ ಶವವನ್ನು ನೋಡಿದೆನು. ನಂತರ ನನ್ನ ಅಕ್ಕನ ಶವವನ್ನು ಆ್ಯಂಬುಲೆನ್ಸ್‌ನಲ್ಲಿ ನನ್ನ ಮಾವ ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ತಂದರು.

4) ನನ್ನ ಅಕ್ಕನ ಶವವನ್ನು ನಾನು ನೋಡಿದಾಗ ಕೆನ್ನೆ ಮೇಲೆ ಬರೆ ಇತ್ತು, ಕತ್ತಿನ ಹತ್ತಿರ ಬರೆ ಇತ್ತು. ಚಿನ್ನ, ದುಡ್ಡು ತೆಗೆದುಕೊಂಡು ಬಾ ಅಂತ 1 ನೇ ಆರೋಪಿ, ನನ್ನ ಅಕ್ಕನಿಗೆ ಹಿಂಸೆ ಕೊಟ್ಟು ದುಡ್ಡನ್ನು, ಚಿನ್ನವನ್ನು ತರದೇ ಇದ್ದುದಕ್ಕೆ ನನ್ನ ಅಕ್ಕನನ್ನು ಹೊಡೆದು ಸಾಯಿಸಿದ್ದಾರೆ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಕೊಂಡು ಘಟನೆ ಬಗ್ಗೆ ವಿಚಾರಣೆ ಮಾಡಿದರು.

**<u>ಪಾಟೀ ಸವಾಲು ಃ</u>** ಆರೋಪಿ ಪರ ವಕೀಲರು ದಿಃ 11.06.2024 ರ ಆದೇಶದ ಪ್ರಕಾರ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.